ಅಲ್ಲಿಂದ ನಮ್ಮ ಬೇಸ್ ಪಾಯಿಂಟ್ ಸಿಲೇರಿಗಾಂವ್‌ಗೆ ಹೋಗಲು ಬೊಲೆರೋ ಜೀಪ್ ಹತ್ತಿದೆವು. ಸಿಲೇರಿಗಾಂವ್ ಇಲ್ಲಿಂದ 4 ರಿಂದ 5 ಗಂಟೆಯ ಪ್ರಯಾಣ.

ನಮ್ಮ ಜೀಪ್ ಚಾಲಕ ಪ್ರದೀಪ್ ಚತ್ರಿ ಮುಂಚಿನ ದಿನ ರಾತ್ರಿ ಬಂದು ರೈಲ್ವೆ ನಿಲ್ದಾಣದಲ್ಲಿ ಕಾಯುತ್ತಿದ್ದ. ಜೀಪಿನಲ್ಲಿ ನಮ್ಮ ಲಗೇಜ್‌ಗಳನ್ನು ತುಂಬಿಸಿ ನಮ್ಮ ಪ್ರಯಾಣ ಸಿಲೇರಿಗಾಂವ್‌ಗೆ ಪ್ರಾರಂಭವಾಗುತ್ತದೆ. 3 ಕಿಮೀ ಸಾಗಿದ ಬಳಿಕ ಸಿಲಿಗುರಿ ಎಂಬ ನಗರ ಸಿಕ್ಕಿತು. ಇದು ಪಶ್ಚಿಮ ಬಂಗಾಲದ ಎರಡನೇ ಅತಿಹೆಚ್ಚು ಜನನಿಬಿಡ ನಗರ. ಮುಂದೆ 15 ಕಿ.ಮೀ ಪ್ರಯಾಣದ ಬಳಿಕ ಘಟ್ಟ ಪ್ರದೇಶ ಆರಂಭವಾಯಿತು.

ಜುಲುಪ್ ಸಿಲ್ಕ್‌ರೋಡ್‌ನಲ್ಲಿ ತಂಡದೊಂದಿಗೆ ಲೇಖಕ



ಮುಂದೆ ಸಾಗಿದ ಹಾಗೆ ಕಡಿದಾದ ತಿರುವುಗಳು. ಒಂದು ಬದಿಗೆ ಪರ್ವತವನ್ನು ಕಡಿದು ರಸ್ತೆ ಮಾಡಿದ್ದಾರೆ. ಕೆಳಗೆ ತೀಸ್ತಾ ನದಿ ಭೋರ್ಗರೆಯುತ್ತಾ ಹರಿಯುತ್ತದೆ. ತೀಸ್ತಾ ಸಿಕ್ಕಿಂನ ಜೀವನದಿ. ಈ ನದಿಯು ಸಿಕ್ಕಿಂನ ದಕ್ಷಿಣ ಮತ್ತು ಪೂರ್ವ ಜಿಲ್ಲೆಗಳನ್ನು ಸೀಳುತ್ತಾ ಸಾಗುತ್ತದೆ. ಪಶ್ಚಿಮ ಬಂಗಾಳ ಮತ್ತು ಸಿಕ್ಕಿಂ ನಡುವೆ ನೈಸರ್ಗಿಕ ಮೇರೆಯಂತಿರುವ ತೀಸ್ತಾ, ಸಿಕ್ಕಿಂ ಪ್ರಯಾಣದ ಉದ್ದಕ್ಕೂ ಸಹಯಾತ್ರಿಯಾಗುತ್ತದೆ. ಈ ನದಿಯು ಕೆಲವು ಕಡೆ ಹಿರಿದಾಗಿ ಭವ್ಯವಾಗಿ, ಕೊಳ್ಳವಾಗಿ, ಹೊಳೆಯಾಗಿ ಹಳ್ಳವಾಗಿದೆ. ಅಭಿವೃದ್ಧಿಯ ನೆಪದಲ್ಲಿ ಅನೇಕ ಕಡೆ ಅಣೆಕಟ್ಟುಗಳನ್ನು ಕಟ್ಟಿದ್ದಾರೆ.

ರಸ್ತೆಯುದ್ದಕ್ಕೂ ಅಲ್ಲಲ್ಲಿ ಭೂಕುಸಿತವಾದದ್ದು ಕಂಡು ಬಂತು. ನಮ್ಮ ಜೀಪ್ ಚಾಲಕ ಬಹಳ ಜಾಗರೂಕತೆಯಿಂದ ಚಲಾಯಿಸುತ್ತಿದ್ದ. ಇಲ್ಲಿ ವಾಹನ ಚಲಾಯಿಸುವರು ಎಲ್ಲರೂ ಬಹಳ ಸಂಯಮದಿಂದ ವಾಹನಗಳನ್ನು ಚಲಾಯಿಸುತ್ತಾರೆ. ಇಲ್ಲಿನ ಪ್ರಕೃತಿಯೇ ಅವರಿಗೆ ಸಂಯಮವನ್ನೂ ಕಲಿಸಿದೆ.

ದಾರಿಯಲ್ಲಿ ಅಲ್ಲಲ್ಲಿ ಬೋರ್ಡರ್ ರೋಡ್ ಆರ್ಗನೈಝೇಶನ್ (ಬಿಆರ್‌ಒ) ನವರು ರಸ್ತೆ ಕಾಮಗಾರಿಗಳನ್ನು ನಡೆಸುತ್ತಿದ್ದರು. ರಸ್ತೆ ರಿಪೇರಿಯಲ್ಲಿ ಮಹಿಳಾ ಕಾರ್ಮಿಕರೇ ಜಾಸ್ತಿ.

ಕಡಿದಾದ ಏರು ದಾರಿ. ಎಚ್ಚರದ ಪ್ರಯಾಣ. ದಾರಿಯುದ್ದಕ್ಕೂ ಪರ್ವತಗಳ ರುದ್ರರಮಣೀಯ ದೃಶ್ಯ. ಹೆಜ್ಜೆ ಹೆಜ್ಜೆಗೂ ಜಲಪಾತಗಳ ಸೊಬಗು. ಪ್ರಕೃತಿಯ

ಜುಲುಪ್ ಸಿಲ್ಕ್‌ರೋಡ್

